ಕನ್ನಡದ ಅತ್ಯುತ್ತಮ ಕಥೆಗಾರ್ತಿಯರಲ್ಲೊಬ್ಬರಾದ ಮಿತ್ರಾ ವೆಂಕಟ್ರಾಜ್ ಉಡುಪಿ ಜಿಲ್ಲೆಯ ಕುಂದಾಪುರದವರು. 'ರುಕುಮಾಯಿ', 'ಹಕ್ಕಿ ಮತ್ತು ಅವಳು', 'ಮಾಯಕದ ಸತ್ಯ' ಅವರ ಕಥಾಸಂಕಲನಗಳು. 'ಪಾಚಿ ಕಟ್ಟಿದ ಪಾಗಾರ' ಪ್ರಸಿದ್ಧ ಕಾದಂಬರಿ. ಪ್ರಸ್ತುತ ಮುಂಬೈ ನಿವಾಸಿ.

ಸಿಕ್ಕಿದಂತೆ ವರ್ತಿಸುತ್ತಿದ್ದಾರಲ್ಲ' ಎಂದೆ ಛಾಯಾಳ ಹತ್ತಿರ.

'ಎಷ್ಟು ದಿವಸಗಳಿಂದ ಶ್ರಮ ಪಡುತ್ತಿದ್ದಾರೆ, ಮಹತ್ವದ್ದೊಂದು ಬೆಳವಣಿಗೆಗಾಗಿ ಹಾತೊರೆಯುವುದು ಸಹಜವೇ. ಹೆಚ್ಚಿನವರು ತಾತ್ಕಾಲಿಕ ಕೆಲಸಗಾರರು, ದೊಡ್ಡ ಕೆಲಸ ಬಂದರೆ ತಮ್ಮ ಕೆಲಸ ಶಾಶ್ವತವಾಗಬಹುದೆಂಬ ನಿರೀಕ್ಷೆ ಅವರಿಗೆ' ಎಂದು ಕಂಪ್ಯೂಟರಿನಿಂದ ಮುಖ ತಿರುಗಿಸುತ್ತ ಛಾಯಾ ಹೇಳಿದಳು. ಮತ್ತೆ ನಾವಿಬ್ಬರೂ ಸೇರಿ ವರುಣ್ ವೆರಾನಿಗೂ, ನೀಲಿಮಾಳಿಗೂ ಸಂದೇಶ-ಫೋನುಗಳ ಮುಖಾಂತರ ವಿಷಯ ತಿಳಿಸಿದೆವು. ಸದ್ಯಕ್ಕೆ ನಾವೇ ಅದನ್ನು ನಿಭಾಯಿಸಬೇಕೆಂಬ ಆದೇಶವೂ ಬಂತು. ಭೇಟಿಯ ದಿನಕ್ಕೆ ವಾರ ಕಾಲವಿದ್ದರೂ, ಅಷ್ಟರೊಳಗೆ ಬೇಕಾದ ತಯಾರಿ ಮಾಡಿಕೊಳ್ಳಲು ಅಗತ್ಯದ ನಿರ್ದೇಶನಗಳನ್ನು ಕೊಡುತ್ತ, ಮೆನೇಜರ್ ಛಾಯಾ ಪೆರಿನಾಝುಳ ಬಗೆಗೂ ಒಂದಷ್ಟು ಮಾಹಿತಿ ಕೊಟ್ಟಳು.

'ಅವಳೊಬ್ಬ ವಿಕ್ಷಿಪ್ತ ವ್ಯಕ್ತಿ' ಒಬ್ಬಳೇ ಮಗಳು. ತಂದೆ ಹೋದ ಮೇಲೆ ಎಲ್ಲ ಆಸ್ತಿ ಇವಳಿಗೇ ಬಂದಿದೆ. ಅಂದರೆ ಹಣಪಾವತಿಯ ಬಗ್ಗೆ ಏನೂ ತೊಂದರೆಯಿಲ್ಲ ಎಂದ ಛಾಯಾ, ಜೊತೆಯಲ್ಲೇ ಒಂದು ಸೂಕ್ಷ್ಮ ಎಚ್ಚರಿಕೆಯನ್ನೂ ಕೊಟ್ಟಳು. ಛಾಯಾ ಸೇಥಿ ಪ್ರಾಯದಲ್ಲಿ ನನಗಿಂತ ಹಿರಿಯಳು, ಅಲ್ಲದೆ ಫ್ಯಾಶನ್ ಜಗತ್ತಿನ ಅನುಭವಸ್ಥೆಯೂ ಆಗಿದ್ದರಿಂದ ಉಪದೇಶ ಕೊಡಲು ಅವಳ ನಾಲಿಗೆ ಯಾವಾಗಲೂ ತುರಿಸುತ್ತಿರುತ್ತಿತ್ತು. ಅಂಥ ಯಾವ ಸಂದರ್ಭವನ್ನೂ ಅವಳು ಬಿಟ್ಟುಕೊಟ್ಟದ್ದಿಲ್ಲ. 'ಪೆರಿನಾಝುಳ ವಿಚಾರ ಸತ್ಯಕತೆಗಳಿಗಿಂತ ದಂತಕತೆಗಳೇ ಜಾಸ್ತಿ, ಯಾರು ಯಾರೋ ಏನೇನೆಲ್ಲ ಹೇಳಬಹುದು. ಈ ಕಿವಿಯಲ್ಲಿ ಕೇಳಿ...' ಎಂದು ಕುಳಿತಲ್ಲಿಂದಲೇ ಬಗ್ಗಿ, ಗುಟ್ಟಿನ ಸ್ವರದಲ್ಲಿ ಹೇಳಿ, ಐದೂ ಬೆರಳುಗಳ ತುದಿಗಳನ್ನು ಒಟ್ಟು ತಂದು ಹೊರಕ್ಕೆ ಚೆಲ್ಲಿ, 'ಪೂ... ಗೊತ್ತಾಯಿತಲ್ಲ,' ಎಂದವಳು, ಎಲ್ಲ ಒಳ್ಳೇದಾಗಲಿ ಎಂಬಂತೆ ಹೆಬ್ಬೆರಳು ಎತ್ತಿ ಗೆಲುವಿನ ಚಿಹ್ನೆ ಮಾಡಿದಳು.

ಅವಳು ಹೇಳಿದ್ದು ಸುಳ್ಳಲ್ಲ ಎಂಬ ಸತ್ಯ ಮುಂದಿನ ಒಂದು ವಾರದಲ್ಲಿ ಸಾಬೀತಾಯಿತು. ಆ ತನಕ ಪೆರಿನಾಝ್ ಎಂಬ ಹೆಸರೂ ಕೇಳಿರದಿದ್ದವಳಿಗೆ ಈಗ ಒಂದು ಕಾದಂಬರಿಗಾಗುವಷ್ಟು ವಿಷಯ ಸಿಕ್ಕತೊಡಗಿತ್ತು. ಆಕೆಯ ಮನೆಯ ವಿಸ್ತೀರ್ಣ ಇಷ್ಟೆಂದು ಒಬ್ಬರು ತಿಳಿಸಿದರೆ, ಕೆಲಸದ ಸಿಬ್ಬಂದಿಗಳ ಸಂಖ್ಯೆ ಇಂತಿಷ್ಟೆಂದು ಮತ್ಯಾರೋ ಹೇಳುತ್ತಿದ್ದರು.

ಎಲ್ಲರಿಗೂ ಪೆರಿನಾಝುಳ ಬಗ್ಗೆ ಏನಲ್ಲ ಏನೆಂದರೂ, ಕೆಲವು ವಿಷಯಗಳಾದರೂ ಗೊತ್ತಿದೆಯಲ್ಲ ಎಂದು ನನಗೆ ಆಶ್ಚರ್ಯ. ಹೊರಗಿನಿಂದ ಬಂದ ನನಗೆ ಮುಂಬಯಿಯ ಫ್ಯಾಶನ್ ಜಗತ್ತೇ ಆಗಲಿ, ಪತ್ರಿಕೆ, ಹರಟೆ, ಹಗರಣಗಳ ಹೊರಜಗತ್ತೇ ಆಗಲಿ ಎಲ್ಲವೂ ಹೊಸತೇ. ಕೆಲವು ಪುರವಣಿಗಳು, ಇನ್ನು ಕೆಲವು ಪತ್ರಿಕೆಗಳು ಸಹ ಇಲ್ಲಿನ ಶ್ರೀಮಂತ ಹಾಗೂ ಪ್ರಸಿದ್ಧ ಮಂದಿಯ ಸುದ್ದಿಗಳ ಬಗ್ಗೆಯೇ ಇರುತ್ತಿದ್ದು, ಯಾರು ತಮ್ಮ ಬಗ್ಗೆ ಪತ್ರಿಕೆಗಳಲ್ಲಿ ಬರಬಾರದೆಂದು ಪ್ರಯತ್ನಿಸುತ್ತಿದ್ದರೋ, ಅವರ ಬಗ್ಗೆಯೇ ಪತ್ರಕಾರರು ಜಾಸ್ತಿ ಸಮೀಕ್ಷೆ-ಪರಿಶೀಲನೆಗಳನ್ನು ನಡೆಸುತ್ತಿದ್ದುದು ಒಂದು ವಿಪರ್ಯಾಸವೇ. ಅವಳಿಗೆ ಸಂಬಂಧಿಸಿದ ಯಾವುದೇ ಸುದ್ದಿ ಗಾಳಿಯಲ್ಲಿ ತೇಲಿದಾಗ, ಅವಳ ಬಗ್ಗೆ ಗೊತ್ತಿದ್ದ ಚೂರುಪಾರು ಮಾಹಿತಿಗಳು ಹಬ್ಬಿ, ಆಮೇಲೆ ತಮ್ಮಷ್ಟಕ್ಕೆ ಮುಳುಗಿ, ಇನ್ನೊಂದಿಷ್ಟು ಕಾಲ ಅವಳ ನೆನಪೇ ಅಳಿದು ಹೋಗುತ್ತಿತ್ತು. ಈ ನಡುವೆ ಡೆಲೋನೆಗೆ ಇಮೇಲ್ ಬರೆದು ತಿಳಿಸಿದ್ದೆ. ಅವನಿಂದ ಬಂದ ಉತ್ತರದಲ್ಲಿ, ಹಿಂದೊಮ್ಮೆ ಪೆರಿನಾಝುಳಿಗಾಗಿ ಫ್ರಾನ್ಸಿನ ವಿನ್ಯಾಸಗಳ ಕೆಲವು ಉಡುಪುಗಳನ್ನು ಮಾಡಿಕೊಟ್ಟದ್ದ ಬಗ್ಗೆ ಬರೆದಿದ್ದ. ತನ್ನದೇ ಖರ್ಚಿನಲ್ಲಿ ಭಾರತಕ್ಕೂ ಕರೆಸಿಕೊಂಡಿದ್ದಳಂತೆ. ಅವಳ ಬುದ್ಧಿಮತ್ತೆಯ ಬಗ್ಗೆ, ವಿಜ್ಞಾನ-ಚರಿತ್ರೆಗಳ ಬಗ್ಗೆ ಅವಳಿಗಿದ್ದ ಅಪಾರ ಜ್ಞಾನದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿ, ಕೊನೆಯಲ್ಲಿ 'ನಿನ್ನ ಅದೃಷ್ಟ ಖುಲಾಯಿಸಲಿ,' ಎಂದು ಹಾರೈಸಿದ್ದ.